# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ಕಾ.ವಿ./ವಿವ-13/2009-10 ದಿನಾಂಕ **21.10.2009.**

## ಟೆಂಡರು ಪ್ರಕಟಣೆ

ನಗರಸಭೆಯ ನೀರು ಸರಬರಾಜು ಘಟಕಗಳಾದ ಮಾರಿಗದ್ದೆ ಜಾಕ್‌ವೆಲ್ ಹಾಗೂ ಮಧ್ಯಂತರ ಪಂಪು ಘಟಕ ಅಡಕಳ್ಳಿಯಲ್ಲಿ ಕೆಲಸ ನಿರ್ವಹಿಸಲು ಆಪರೇಟರ್ ಹಾಗೂ ಹೆಲ್ಪರ್‌ಗಳ ಮಾನವ ಶಕ್ತಿಯ ಅವಶ್ಯಕತೆಯಿದ್ದು ಸದರಿ ಸೇವೆ ಒದಗಿಸಲು ಗುತ್ತಿಗೆದಾರರು/ಏಜನ್ಸಿಯವರಿಂದ ಮಾನವ ಶಕ್ತಿ ಪೂರೈಸಲು ಟೆಂಡರು ದರಗಳನ್ನು ಆಹ್ವಾನಿಸಲಾಗಿದೆ. ಸದರಿ ಮಾನವ ಶಕ್ತಿಯನ್ನು ಪೂರೈಸುವ ಸಂಸ್ಥೆ/ಅಭ್ಯರ್ಥಿಗಳು ತಮ್ಮ ದರವಾರನ್ನು ದಿನಾಂಕ: 23.11.2009ರ ಸಂಜೆ: 4:30 ಗಂಟೆಯವರೆಗೆ ಸಲ್ಲಿಸುವುದು. ಸ್ವೀಕೃತ ಟೆಂಡರುಗಳನ್ನು ದಿನಾಂಕ: 23.11.2009 ರಂದು ಸಂಜೆ: 5:00 ಗಂಟೆಗೆ ಹಾಜರಿರುವ ಗುತ್ತಿಗೆದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ರಜೆ ಇದ್ದಲ್ಲಿ ಮುಂದಿನ ಕಚೇರಿ ವೇಳೆಯಲ್ಲಿ ತೆರೆಯಲಾಗುವುದು. ಇಲ್ಲವಾದಲ್ಲಿ ಮುಂದಿನ ದಿನಾಂಕಗಳನ್ನು ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ, ಷರತ್ತುಗಳಿಗಾಗಿ ಕಚೇರಿಯ ಕೆಲಸದ ವೇಳೆಯಲ್ಲಿ ಖುದ್ದಾಗಿ ಬಂದು ಕೇಳಿ ತಿಳಿದುಕೊಳ್ಳತಕ್ಕದ್ದು.

1. ಖಾಲಿ ಮಾದರಿ ಟೆಂಡರು ಫಾರ್ಮಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 21.11.2009 (5:30 ಗಂಟೆಯವರೆಗೆ)
2. ಭರ್ತಿ ಮಾಡಲ್ಪಟ್ಟ ಮೊಹರಾದ ಟೆಂಡರು ನಮೂನೆಗಳನ್ನು ಸ್ವೀಕರಿಸುವ ದಿನಾಂಕ : 23.11.2009 (4:30 ಗಂಟೆಯವರೆಗೆ)
3. ಸ್ವೀಕೃತ ಟೆಂಡರುಗಳನ್ನು ತೆರೆಯುವ ದಿನಾಂಕ : 23.11.2009 (5:00 ಗಂಟೆಗೆ)

| ಕ್ರ.ಸಂ. | ಕಾವಲುಗಾರರ ಸೇವೆ ಸ್ಥಳ ಹಾಗೂ ವಿವರ | ಆಪರೇಟರ್ | ಹೆಲ್ಪರ್ |
|---|---|---|---|
| 1 | ಮಾರಿಗದ್ದೆ ಜಾಕ್‌ವೆಲ್‌ನಲ್ಲಿ ಕೆಲಸ ನಿರ್ವಹಿಸುವುದು. | 4 ಮಾನವ ಶಕ್ತಿ | 4 ಮಾನವ ಶಕ್ತಿ |
| 1 | ಅಡಕಳ್ಳಿ ಮಧ್ಯಂತರ ಘಟಕದಲ್ಲಿ ಕೆಲಸ ನಿರ್ವಹಿಸುವುದು. | | |

ವಿಧಿಸಲಾಗಿರುವ ಪೂರ್ವ ಶರತ್ತುಗಳು:-

1. ಗುತ್ತಿಗೆದಾರರು/ಏಜನ್ಸಿಯವರು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಪ್ರಮಾಣ ಪತ್ರ ಕಡ್ಡಾಯವಾಗಿ ಅರ್ಜಿ ಪಡೆಯುವ ವೇಳೆಗೆ ಒದಗಿಸುವುದು.
2. ಯಶಸ್ವಿ ಗುತ್ತಿಗೆ ಸಂಸ್ಥೆ/ಏಜನ್ಸಿಯವರು ರೂ. 25,000/- ಭದ್ರತಾ ಠೇವಣಿಯನ್ನು ಪೌರಾಯುಕ್ತರ ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಡಿ.ಡಿ. ಮುಖಾಂತರ ಸಲ್ಲಿಸತಕ್ಕದ್ದು.
3. ಆಪರೇಟ್/ಹೆಲ್ಪರ್‌ಗಳ ಸೇವಾ ಸ್ಥಳ ಹಾಗೂ ಸಂಖ್ಯೆ ಬದಲಾಯಿಸುವ, ಹೆಚ್ಚಿಸುವ, ಕಡಿಮೆ ಮಾಡುವ ಅಧಿಕಾರ ನಗರಸಭೆಗೆ ಇದ್ದು ಅದನ್ನು ಟೆಂಡರುದಾರರು ಪಾಲಿಸತಕ್ಕದ್ದಿರುತ್ತದೆ.
4. ಗುತ್ತಿಗೆದಾರರು/ಏಜನ್ಸಿಯವರು ನಿಗದಿತ ಮುಂಗಡ ಠೇವಣಿ ಮೊತ್ತವನ್ನು ಪೌರಾಯುಕ್ತರು, ನಗರಸಭೆ, ಶಿರಸಿ ರವರ ಪದನಾಮಕ್ಕೆ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಡಿ.ಡಿ. ಯನ್ನು ಸಲ್ಲಿಸುವುದು.
5. ಆಪರೇಟರ್/ಹೆಲ್ಪರಗಳ ಕೆಲಸದ ಸಮಯದಲ್ಲಿ ಸಂಬಂಧಿತ ಸ್ಥಳದ ನಗರಸಭೆ ಆಸ್ತಿಗೆ ಹಾನಿಯಾದಲ್ಲಿ ಗುತ್ತಿಗೆದಾರರು/ಏಜನ್ಸಿಯವರೇ ಜವಾಬ್ದಾರಿಯಾಗಿರುತ್ತಾರೆ.
6. ಟೆಂಡರು ದರ ಸ್ವೀಕರಿಸುವ ಯಾ ತಿರಸ್ಕರಿಸುವ ಅಧಿಕಾರ ನಗರಸಭೆ ಕಾಯ್ದಿರಿಸಿಕೊಂಡಿದೆ.
7. ಆಪರೇಟರ್/ಹೆಲ್ಪಗಳ ರಜೆ ಯಾ ಗೈರಿನ ಸಮಯದಲ್ಲಿ ಬದಲಿ ವ್ಯವಸ್ಥೆ ಮಾಡುವ ಹೊಣೆ ಗುತ್ತಿಗೆದಾರರು/ಏಜನ್ಸಿಯವರದೇ ಇರುತ್ತದೆ.
8. ಆಪರೇಟರ್ ಕೆಲಸ ನಿರ್ವಹಿಸುವ ಅಭ್ಯರ್ಥಿಗಳು ಕನಿಷ್ಟ ಐ.ಟಿ.ಐ. ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು ಹಾಗೂ ಹೆಲ್ಪರ್ ಹುದ್ದೆಗೆ ಕಾರ್ಯನಿರ್ವಹಿಸಲು ಕನಿಷ್ಟ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು. ಈ ಕುರಿತು ಗುತ್ತಿಗೆ ಸಂಸ್ಥೆಯವರು ಪ್ರಮಾಣ ಪತ್ರಗಳನ್ನು ಟೆಂಡರು ಜೊತೆಗೆ ಹಾಜರುಪಡಿಸತಕ್ಕದ್ದು.

**(ಜಿ. ಜಗದೀಶ)** ಕೆ.ಎ.ಎಸ್.
ಪೌರಾಯುಕ್ತರು,
ನಗರಸಭೆ, ಶಿರಸಿ.